ಜಿಲ್ಲಾ ವಲಯ ಯೋಜನೆಗಳು

- ಕೃಷಿಗೆ ಯೋಗ್ಯವಲ್ಲದ ಜೌಗು/ಚೌಳು ಭೂಮಿಯಲ್ಲಿ, ಮೀನು ಕೊಳಗಳ ನಿರ್ಮಾಣ ಮಾಡಿ ಮೀನು ಪಾಲನೆಯನ್ನು ತೆಗೆದು ಕೊಳ್ಳಲು ಒಂದು ಎಕರೆಗೆ ರೂ.30,000/– ಗಳಂತೆ ಸಹಾಯಧನ ಹಾಗೂ ಸ್ವಂತ ಜಮೀನಿನಲ್ಲಿ 1 ಎಕರೆ ಮೀನು ಕೊಳ ನಿರ್ಮಾಣಕ್ಕೆ ರೂ.10,000/–ಗಳ ಸಹಾಯಧನ

- ಕೆರೆಗಳಲ್ಲಿ ಬೆಳೆದಿರುವ ಕಳೆಗಳ ನಿರ್ಮೂಲನೆಗೆ ಹುಲ್ಲು ಗೆಂಡೆ ಮೀನುಮರಿ ಬಿತ್ತನೆ ಮಾಡಲು ಶೇ.50ರಷ್ಟು ಗರಿಷ್ಠ ರೂ.5000/– ಗಳ ಸಹಾಯಧನ ನೀಡಲಾಗುತ್ತಿದೆ.

- ಸ್ವಂತ ನೀರಾವರಿ ಬಾವಿ ಮತ್ತು ಹೊಂಡಗಳಲ್ಲಿ ಮೀನು ಕೃಷಿಯನ್ನು ತೆಗೆದುಕೊಳ್ಳಲು ಮುಂದೆ ಬರುವ ಕೃಷಿಕರಿಗೆ ಉಚಿತವಾಗಿ 250 ರಿಂದ 1000 ಸಾಮಾನ್ಯಗೆಂಡೆಯನ್ನು ಸರಬರಾಜು ಮಾಡಲಾಗುತ್ತಿದೆ.

- ಮೀನು ಕೃಷಿಯ ಹಿತದೃಷ್ಟಿಯಿಂದ ಸಾರ್ವಜನಿಕರ ಮಾಹಿತಿಗಾಗಿ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತಿದೆ

- ಮೀನುಗಾರರು ಮೀನನ್ನು ತಾಜಾ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು, ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ, ತ್ರಿಚಕ್ರ ಹಾಗೂ ನಾಲ್ಕು ಚಕ್ರದ ವಾಹನ ಖರೀದಿಸಲು ಸಹಾಯಧನ

7(57) **ಶ್ರೀ ಬಾಲಕೃಷ್ಣ ಸಿ ಎನ್ (ಶ್ರವಣ ಬೆಳಗೊಳ)** . ಕಾರ್ಮಿಕರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳ ಸಣ್ಣ, ಮಧ್ಯಮ ಮತ್ತು ಬೃಹತ್ ಉದ್ದಿಮೆಗಳು ಹಾಗೂ ಹೋಟೆಲ್‌ಗಳು ಮತ್ತು ಆಸ್ಪತ್ರೆಗಳ ವಿವರಗಳು ಮತ್ತು ಅವುಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರುಗಳ ಸಂಖ್ಯಾ ವಿವರಗಳೇನು?

ಆ) ಕಾರ್ಮಿಕರ ರಕ್ಷಣೆ ಮತ್ತು ಭದ್ರತೆ ಸೇರಿದಂತೆ ಇಲಾಖೆಯು ಜಾರಿ ಗೊಳಿಸುತ್ತಿರುವ ಯೋಜನೆಗಳ ವಿವರಗಳೇನು?

ಇ) ಕಾರ್ಮಿಕರ ಕುಟುಂಬಗಳಿಗೆ ರಾಷ್ಟ್ರೀಯ ವಿಮಾ ಯೋಜನೆಯ ಅನುಷ್ಠಾನದ ವಿವರಗಳೇನು ಹಾಗೂ ಬಾಲಕಾರ್ಮಿಕರಿಗೆ ಕಾನೂನು ಪ್ರಕಾರವಾಗಿ ಅನ್ವಯವಾಗುತ್ತಿರುವ ವಯೋಮಿತಿಯ ವಿವರಗಳೇನು?

ಶ್ರೀ ಟಿ.ಪರಮೇಶ್ವರ ನಾಯ್ಕ್ (ಕಾರ್ಮಿಕರ ಸಚಿವರು)

ಅ) ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ಸಾರ್ವಜನಿಕ ಕ್ಷೇತ್ರದ 16 ಸಂಸ್ಥೆಗಳಿದ್ದು 1587 ಕಾರ್ಮಿಕರು ಹಾಗೂ ಖಾಸಗಿ ಕ್ಷೇತ್ರದ 79 ಸಂಸ್ಥೆಗಳಿದ್ದು, 10587 ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ ಜಿಲ್ಲೆಯಲ್ಲಿ ಒಟ್ಟು 98 ಹೋಟೆಲ್‌ಗಳಿದ್ದು, 898 ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ ಅಲ್ಲದೆ 27 ಆಸ್ಪತ್ರೆಗಳಿದ್ದು, 530 ಕಾರ್ಮಿಕರು ಕೆಲಸ ನಿರ್ವಹಿಸು ತ್ತಿದ್ದಾರೆ

ಆ) ಕಾರ್ಮಿಕರ ಸೇವಾ ರಕ್ಷಣೆ ಮತ್ತು ಭದ್ರತೆಗಾಗಿ ಅಂದರೆ, ನೇಮಕಾತಿ ಆದೇಶ, ಕೆಲಸದ ಅವಧಿ, ವಾರದ ರಜೆ, ರಜೆ ಸೌಲಭ್ಯ, ವಿಶ್ರಾಂತಿ, ಸುರಕ್ಷತೆ, ಆರೋಗ್ಯ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿ ಸುವ ಸಂಬಂಧ ಈ ಕೆಳಕಂಡ ಕಾಯ್ದೆಗಳನ್ನು ಜಾರಿಗೆ ತರಲಾಗುತ್ತಿದೆ

1) ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961

2) ಬೀಡಿ ಮತ್ತು ಸಿಗಾರ್ ಕಾರ್ಮಿಕರು (ಸೇವಾ ಷರತ್ತುಗಳು)ಕಾಯ್ದೆ 1966

3) ತೋಟ ಕಾರ್ಮಿಕರ ಕಾಯ್ದೆ, 1951

4) ಮೋಟಾರು ಸಾರಿಗೆ ಕಾರ್ಮಿಕರ ಕಾಯ್ದೆ, 1961

5) ಕಾರ್ಖಾನೆಗಳ ಕಾಯ್ದೆ 1948

6) ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತು) ಕಾಯ್ದೆ 1996

ಗುತ್ತಿಗೆ ಮತ್ತು ವಲಸೆ ಕಾರ್ಮಿಕರ ಸೇವಾಭದ್ರತೆಗಾಗಿ ಈ ಕೆಳಕಂಡ ಕಾಯ್ದೆಗಳನ್ನು ಜಾರಿಗೆ ತರಲಾಗುತ್ತಿದೆ,

1) ಗುತ್ತಿಗೆ ಕಾರ್ಮಿಕರ (ನಿಯಂತ್ರಣ ಮತ್ತು ರದ್ದತಿ) ಕಾಯ್ದೆ 1970 2) ಅಂತರಾಜ್ಯ ವಲಸೆ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾಷರತ್ತು) ಕಾಯ್ದೆ 1979 50 ಮತ್ತು 50 ಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಸಂಸ್ಥೆಗಳಿಗೆ ಕೈಗಾರಿಕಾ ಔದ್ಯಮಿಕ (ಸ್ಥಾಯಿ ಆದೇಶಗಳು) ಕಾಯ್ದೆ 1946 ಅನ್ವಯವಾಗುತ್ತಿದ್ದು ಇದರಡಿಯಲ್ಲಿ ಕಾರ್ಮಿಕರ ವರ್ಗೀಕರಣ, ನೇಮಕಾತಿ ಆದೇಶ, ಶಿಸ್ತು ಪ್ರಕರಣಗಳಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳು, ರಜೆ ಮಂಜೂರಾತಿ ವಿಧಾನಗಳು ಮತ್ತು ಲೈಂಗಿಕ ಕಿರುಕುಳ ತಡೆ ಸಮಿತಿಗಳ ರಚನೆ, ಸೇವಾ ದೃಢೀಕರಣ ಪತ್ರ, ನಿವೃತ್ತಿ ಇತ್ಯಾದಿ ಅಂಶಗಳನ್ನು ಜಾರಿಗೆ ತರಲು ಅವಕಾಶವಿರುತ್ತದೆ.

ಇ) ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯು ಅಸಂಘಟಿತ ವಲಯದ ಕಾರ್ಮಿಕರ ಆರೋಗ್ಯ ರಕ್ಷಣೆಗಾಗಿ ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಮಹಾತ್ವಾಕಾಂಕ್ಷಿ ಯೋಜನೆಯಾಗಿದೆ. ರಾಜ್ಯದಲ್ಲಿ ಈ ಯೋಜನೆಯನ್ನು 2011–12/2012–13ನೇ ಸಾಲಿನಲ್ಲಿ ಎಲ್ಲಾ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿ 17,45,461 ಕುಟುಂಬಗಳಿಗೆ ಗ್ರಾಮೀಣ ಮತ್ತು ನಗರ ಬಿಪಿಎಲ್ಲ ಹಾಗೂ ಹಿಂದಿನ ಆರ್ಥಿಕ ವರ್ಷದಲ್ಲಿ 15 ದಿನ ಕೆಲಸ ಮಾಡಿದ ಎಂ ಜಿ ಎನ್.ಆರ್.ಇ ಜಿ ಎಸ್. ಫಲಾನುಭವಿ ಕುಟುಂಬಗಳಿಗೆ ಯೋಜನೆಯಡಿ 216 ಸರ್ಕಾರಿ ಆಸ್ಪತ್ರೆಗಳು ಸೇರಿದಂತೆ ಒಟ್ಟು 640 ಆಸ್ಪತ್ರೆಗಳನ್ನು ಎಂಪ್ಯಾನಲ್ ಮಾಡಲಾಗಿದೆ.

ಕೇಂದ್ರ ಸರ್ಕಾರವು ಬಾಲ ಕಾರ್ಮಿಕರ ನಿಷೇಧ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ಎಂಬ ಕಾಯ್ದೆಯನ್ನು ಜಾರಿಗೆ ತಂದಿದೆ

ಗುರುತಿಸಲಾಗಿರುವ ಅಪಾಯಕಾರಿ ಹಾಗೂ ಅಪಾಯಕಾರಿಯಲ್ಲದ ಉದ್ದಿಮೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುವುದನ್ನು ನಿಷೇದಿಸಲಾಗಿರುತ್ತದೆ ಅಲ್ಲದೇ ಭಾರತ ಸಂವಿಧಾನದ ಪರಿಚ್ಛೇದ 24ರನ್ವಯ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕಾರ್ಖಾನೆ ಮತ್ತು ಇತರೆ ಅಪಾಯಕಾರಿ ಕೆಲಸ ಗಳಲ್ಲಿ ಕೆಲಸಕ್ಕೆ ನೇಮಕ ಮಾಡಿಕೊಳ್ಳುವುದನ್ನು ನಿಷೇಧಿಸಲಾಗಿರುತ್ತದೆ ಕಾನೂನು ಉಲ್ಲಂಘಿಸಿದವರ ವಿರುದ್ಧ ದಂಡವನ್ನು ವಿಧಿಸಲಾಗುತ್ತದೆ.

8(58) ಶ್ರೀ ಬಾಲಕೃಷ್ಣ.ಸಿ.ಎನ್.(ಶ್ರವಣಬೆಳಗೊಳ) ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಯಲ್ಲಿ ಸಾಮಾಜಿಕ ಭದ್ರತಾ ಯೋಜನೆಯ ವಿವಿಧ ಯೋಜನೆಗಳಡಿಯಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳ ತಾಲೂಕುವಾರು ಸಂಖ್ಯಾ ವಿವರಗಳೇನು?

ಆ) ಕಳೆದ ಎರಡು ವರ್ಷಗಳಲ್ಲಿ ಯೋಜನಾ ಸೌಲಭ್ಯವನ್ನು ಪಡೆಯಲು ಅರ್ಹ ಫಲಾನುಭವಿಗಳಿಂದ ಬಂದ ಒಟ್ಟು ಅರ್ಜಿಗಳೆಷ್ಟು, ಮತ್ತು ಮಂಜೂರಾತಿಗೆ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು,

ಇ) ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸಲು ಅರ್ಹ ಫಲಾನುಭವಿಗಳಿಗೆ ವಿಳಂಬವಿಲ್ಲದೆ ಸೌಲಭ್ಯಗಳನ್ನು ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿ ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)